MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.48 | ENGLISH DAILY | Subscription Yearly - Rs. - | THURSDAY | 14-4-2022 |
|---|---|---|---|---|

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜೋಳ ದರ ಪೂರ್ನಿಯಾ ಮಾರುಕಟ್ಟೆಯಲ್ಲಿ ಹೆಚ್ಚಳ

ಬಿಹಾರದ ಪೂರ್ನಿಯಾ ಮಾರುಕಟ್ಟೆಯಲ್ಲಿ ಹೊಸ ಬೆಳೆಯ ಉತ್ತಮ ಗುಣಮಟ್ಟದ ಜೋಳ ದರಗಳು ಪ್ರಬಲ ಬೇಡಿಕೆಯಿಂದ ಹೆಚ್ಚಳಗೊಂಡಿದೆ. ಕರ್ನಾಟಕದ ಮಾರುಕಟ್ಟೆಗಳಲ್ಲಿ ಜೋಳ ದರ ಉತ್ತಮವಿದ್ದು ಸ್ಥಿರವಿದೆ.

## ಸೋಯಾಬೀನ್, ಸಾಸಿವೆ ಅಕ್ರಮ ದಾಸ್ತಾನು ತಪಾಸಣೆ

ಖಾದ್ಯ ತೈಲ ದರ ಹೆಚ್ಚಳವಾದುದರಿಂದ ಕೇಂದ್ರ ಸರಕಾರ ವಿವಿಧ ರಾಜ್ಯಗಳಲ್ಲಿ ಖಾದ್ಯ ತೈಲ, ಸೋಯಾಬೀನ್, ಸಾಸಿವೆ ಮುಂತಾದ ತೈಲಬೀಜಗಳ ಅಕ್ರಮ ದಾಸ್ತಾನು ತಪಾಸಣೆ ಕೈಗೊಂಡಿದ್ದು, ಹಲವಡೆ ದೊಡ್ಡ ಮಟ್ಟದ ಅಕ್ರಮ ದಾಸ್ತಾನು ಪತ್ತೆಯಾಗಿವೆಯೆನ್ನಲಾಗಿದೆ. ಅವಶ್ಯಕ ವಸ್ತು ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ರಾಜ್ಯ ಸರಕಾರಗಳು ಕೇಳಿಕೊಂಡಿವೆಯೆನ್ನಲಾಗಿದೆ. ಕ್ರಮ ಕೈ ಗೊಳ್ಳುವಾಗ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಜಾಗ್ರತೆ ವಹಿಸಲು ಕೇಳಿಕೊಂಡಿದ್ದು ಅಂತಾರಾಷ್ಟ್ರೀಯವಾಗಿಯೂ ಖಾದ್ಯತೈಲಗಳ ಬೆಲೆ ಹೆಚ್ಚಳವಾಗುತ್ತಿದ್ದು, ಹಿಂದಿನ ತಿಂಗಳಿಂದ ಅಂತಾರಾಷ್ಟ್ರೀಯ ದರ ಹೆಚ್ಚಳದ ಪ್ರಭಾವ ದೇಶೀ ಖಾದ್ಯತೈಲ ದರಗಳ ಮೇಲೂ ಆಗಿದೆಯೆನ್ನಲಾಗಿದೆ.